**ಅ.ದಾ. ಸಂ. 254/2017 PW-1**

**<u>ದಿನಾಂಕಃ 02.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಸಿ.ಎಸ್. ವಕೀಲರಿಂದಃ-</u>**

1) ನಿಪಿ 1 ರ 7 ನೇ ಪುಟದಲ್ಲಿ ಇರುವ ಸಹಿ ನನ್ನದೇ. ಸದರಿ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ನಿಪಿ 1 ರ ಒಕ್ಕಣೆಯನ್ನು ನಾನೇ ಹೇಳಿ ಬರೆಸಿರುವುದು ಎಂದರೆ ಸರಿಯಲ್ಲ. ನಿಪಿ 1 ರ ಒಕ್ಕಣೆಯನ್ನು ಬರೆಸುವ ಸಮಯದಲ್ಲಿ ಸರ್ವೆ ನಂ. 309/1 ರಲ್ಲಿ 9 ಗುಂಟೆ ಎಂದು ನಮೂದಿಸುವ ಬದಲು ಸರ್ವೆ ನಂ.183/2 ರಲ್ಲಿ 19 ವರೆ ಗುಂಟೆ ಎಂದು ತಪ್ಪಾಗಿ ನಮೂದಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಚಾರ ವಾದಿಯಾದ ನಮ್ಮ ತಾಯಿಗೂ ಸಹ ತಿಳಿಸದೇ ಮರೆ ಮಾಚಿ ನಿಪಿ 1 ರಲ್ಲಿ ತಪ್ಪು ಸರ್ವೆ ನಂಬರ್ ನಮೂದು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಈ ವಿಚಾರ ಹೊರಬರುತ್ತದೆ ಎಂಬ ಕಾರಣಕ್ಕಾಗಿ ನಾನೇ ಅವರಿಂದ ಅಧಿಕಾರ ಪತ್ರ ಪಡೆದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂಾ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ